ಯಾರೂ ಇಲ್ಲ, ನೀವು ಬೇರೆಯವರನ್ನು ನೇಮಕಮಾಡಿಕೊಳ್ಳಿ' ಎಂದ. 'ನನ್ನ ಗದ್ದುಗೆ ಮತ್ತು ಒಂಟೆಯನ್ನು ಎರಡು ವಾರದಲ್ಲಿ ಅಲ್ಲಿಂದ ಸಾಗಿಸುತ್ತೇನೆ... ಒಂಟೆ ಹೇಗೂ ಹೊರಗೇ ಇದೆ... ಗದ್ದುಗೆ ಅಲ್ಲಿ ಒಳಗೆ ಇದೆ... ಎರಡು ವಾರ ಅಲ್ಲಿ ಒಳಗೇ ಇರಲು ಅನುಮತಿಸಬೇಕು' ಅಂದ.

'ಎರಡನ್ನೂ ಹೇಗೆ ವಿಲೇವಾರಿ ಮಾಡುತ್ತಾನಂತೆ ಕೇಳು' ಅಂದೆ ನಾನು ಡ್ರೈವರನಲ್ಲಿ.

ಅಬ್ದುಲ್ಲ, 'ಒಂಟೆಯನ್ನು ಮಾರುತ್ತೇನೆ, ಮಗುವಿನಂತೆ ಸಾಕಿದ್ದೇನೆ, ಚೆನ್ನಾಗಿ ನೋಡಿಕೊಳ್ಳುವವರಿಗೆ ಪುಕ್ಕಟೆ ಕೊಟ್ಟರೂ ಕೊಟ್ಟೇನು... ಗದ್ದುಗೆಯದ್ದೇ ಸಮಸ್ಯೆ. ಉತ್ತರಾಧಿಕಾರಿಯಾಗಲು ಮುಂದೆ ಬರುವವರು ಯಾರೂ ಇಲ್ಲ. ಗದ್ದುಗೆಯನ್ನು ಉಳಿಸಿಕೊಂಡು ಮನೆತನವನ್ನು ರಕ್ಷಿಸಬೇಕು ಎನ್ನುತ್ತಿದೆ ಮನಸ್ಸು. ಆದರೆ ಯಾರಿಗಾಗಿ? ಮಗನ ಮನೆಯ ಬಳಿ ಕಡಿಮೆ ಬಾಡಿಗೆಯ ಒಂದು ಕೋಣೆ ಹುಡುಕುತ್ತಿದ್ದೇನೆ... ಒಳಗೆ ಅದನ್ನಿಡುವಷ್ಟು ಜಾಗ ಇದ್ದರೆ ಸಾಕು... ಹೇಗೂ ಕಂಪೆನಿ ನಿವೃತ್ತಿಯ ಹಣ ಕೊಡುತ್ತದಲ್ಲ, ಬಾಡಿಗೆ ಕೊಟ್ಟು ಎಷ್ಟು ವರ್ಷ ಸಾಧ್ಯವೋ ಅಷ್ಟು ವರ್ಷ ಉಳಿಸಿಕೊಳ್ಳುತ್ತೇನೆ... ಸಾಹುಕಾರರು ಅಲ್ಲೇ ಇಟ್ಟುಕೊಳ್ಳಲು ಸಮ್ಮತಿಸಿದರೆ ಬಾಡಿಗೆ ಹಣ ಉಳಿಯುತ್ತಿತ್ತು' ಅಷ್ಟು ಹೇಳಿ ಮುಂದೆ ಹೇಳಲಾಗದೆ ಬಿಕ್ಕಿ ಬಿಕ್ಕಿ ಅತ್ತು ಬಿಟ್ಟನಂತೆ.

ಅದನ್ನು ಹೋಗಿ ಸಾಹುಕಾರರಲ್ಲಿ ಹೇಳಿದೆ. 'ಬಾಡಿಗೆ ಕೋಣೆ ಹುಡುಕುವುದು ಬೇಡ ಅನ್ನು. ಅವನ ಗದ್ದುಗೆ ಅಲ್ಲೇ ಇರಲಿ. ಸಾಯುವವರೆಗೂ ಉತ್ತರಾಧಿಕಾರಿಯನ್ನು ಹುಡುಕುತ್ತಾ ಬದುಕಿರಲಿ, ಸಿಕ್ಕಿದರೆ ಗದ್ದುಗೆ ಕೊಂಡುಹೋಗಿ ಪಟ್ಟಾಭಿಷೇಕ ಮಾಡಲಿ' ಅಂದರಾತ.

ಡ್ರೈವರ್ ಅದನ್ನು ಹೇಳಿದಾಗ ಅಬ್ದುಲ್ಲ ತುಂಬ ಸಂತೋಷಗೊಂಡನಂತೆ. 'ಒಂದಲ್ಲ ಒಂದು ದಿನ ಒಬ್ಬನನ್ನು ಕರೆದು ತರುತ್ತೇನೆ. ತರಲಾಗದೆ ನಾನು ಸತ್ತುಹೋದರೆ ಗದ್ದುಗೆಯನ್ನು ಅಲ್ಲೇ ಹೊರಗೆ ಮರಳಿನಲ್ಲಿ ಹೂಳಿಬಿಡಿ' ಅಂದನಂತೆ.

★★★

ಹಲವಾರು ವರ್ಷಗಳಿಂದ ದೂಳು ತಿನ್ನುತ್ತ ಗದ್ದುಗೆ ನಮ್ಮ ಗೋದಾಮಿನಲ್ಲೇ ಉಳಿದಿದೆ. ಯಾರೂ ಅದರ ಮೇಲೆ ಕುಳಿತುಕೊಳ್ಳಬಾರದೆಂದು ಅಲ್ಲಿಯ ಹುಡುಗರು ಆತನ ಹಳೆಯ ಒಂದುಜತೆ ಚಪ್ಪಲಿಯನ್ನು ಅದರ ಮೇಲಿಟ್ಟು ಕಾಯುತ್ತಿದ್ದಾರೆ.

ಇಲ್ಲಿ ನಾವೂ ಕಾಯುತ್ತಿದ್ದೇವೆ.

## ಗೋಪೀನಾಥ್ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿ. ತಂದೆ ಹೆಸರಾಂತ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ಅಮ್ಮ ಮುತ್ತಮ್ಮ. ವಿದ್ಯಾಭ್ಯಾಸ ಕಟಪಾಡಿ, ಸುರತ್ಕಲ್ ಮತ್ತು ಮಂಗಳೂರಲ್ಲಿ. ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್. ಪ್ರಸ್ತುತ ದುಬೈಯಲ್ಲಿ ಉದ್ಯೋಗ. ಅವರ ಕಥಾಸಂಕಲನಗಳು: 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?'